ಕೆ.ಇ.ಬಿ.ಯಲ್ಲಿ ಕೂಡ ಆ ಒಂದು ನಿಟ್ಟಿನಲ್ಲಿ ಸ್ಕೀಂ ಮಾಡತಕ್ಕಂಥ ರೂಪುರೇಷೆಗಳೂ ಕೂಡ ಬಂದಿದೆ. ಮುಂದಿನ ತಿಂಗಳ ಒಳಗಡೆ ಆ ಒಂದು ಸ್ಕೀಂನ್ನು ತಾವು ಜಾರಿಯಲ್ಲಿ ತರುತ್ತೇವೆ, ಅದನ್ನು ಜಾರಿಗೆ ತಂದಾಗ ಹೆಚ್ಚಿನ ಗ್ರಾಹಕರಿಗೂ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಕುದುರೆಮುಖ ಕಂಪನಿಯಿಂದ ಕೆ.ಇ.ಬಿ.ಗೆ ಬರಬೇಕಾದ ಬಾಕಿಹಣವನ್ನು ಮನ್ನಾ ಮಾಡಿ ಎಂದು ಪಾರ್ಲಿಮೆಂಟರಿ ಸಬ್‌ಕಮಿಟಿಯಿಂದ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುದು ನಿಜವೇ?

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಉಪಾಧ್ಯಕ್ಷರಿಗೆ, ಇದರ ಬಗ್ಗೆ ನಮಗೆ ಇಲ್ಲಿಯವರೆಗೆ ಯಾವುದೇ ಮಾಹಿತಿ ಬಂದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಭಾಗ್ಯಜ್ಯೋತಿ ಯೋಜನೆಯಿಂದ ಕೆ.ಇ.ಬಿ.ಗೆ ಬರಬೇಕಾಗದ ಹಣವನ್ನು ಮನ್ನಾ ಮಾಡಬೇಕೆಂದು ಸಚಿವಸಂಪುಟದಲ್ಲಿ ನಿರ್ಧಾರವಾಗಿದೆಯೆಂದು ಕೇಳಿದ್ದೇನೆ. ಅದು ನಿಜವೇ?

ಶ್ರೀಶರಣಬಸಪ್ಪ ದರ್ಶನಾಪುರ : ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ಏನೂ ಡಿಸಿಷನ್ ಆಗಿಲ್ಲ;

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮೂಲ ಪ್ರಶ್ನೆಗೆ ಉಪಪ್ರಶ್ನೆಗಳನ್ನು ಕೇಳಿದರೆ ತತ್ ಕ್ಷಣದಲ್ಲಿ ಉತ್ತರ ಸಿಗುತ್ತದೆ. ಬೇರೆ ಪ್ರಶ್ನೆಗಳನ್ನು ಕೇಳಿದರೆ ಹೇಗೆ?

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಭಾಗ್ಯಜ್ಯೋತಿಯಿಂದ ಕೆ.ಇ.ಬಿ.30 ಕೋಟಿ ರೂ.ಗಳು ಬಾಕಿ ಇದೆಯೆಂದು ಮೂಲ ಪ್ರಶ್ನೆಯ ಉತ್ತರದಲ್ಲಿಯೇ ಇದೆ.

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್(ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 6ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 97 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದಿಡುತ್ತೇನೆ.

ಅಂಕೋಲ-ಸಿರ್ಸಿ-ಯಲ್ಲಾಪುರ ತಾಲ್ಲೂಕುಗಳಲ್ಲಿನ ಮಜರೆಗಳಿಗೆ ವಿದ್ಯುತ್ ಸಂಪರ್ಕ

244(725)ಶ್ರೀ ಕೆ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998-99ನೇ ಸಾಲಿನಲ್ಲಿ ಮಜರೆ ವಿದ್ಯುತ್ ಯೋಜನೆಗೆ ಸರ್ಕಾರದ ಒದಗಿಸಿದ ಹಣ ಎಷ್ಟು;

ಆ) ಉತ್ತರ ಕನ್ನಡ ಜಿಲ್ಲೆ ಅಂಕೋಲಾ ಸಿರ್ಸಿ-ಯಲ್ಲಾಪುರ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ಮಜರೆಗಳಿಗೆ ವಿದ್ಯುತ್ ಸಂಪರ್ಕ ನೀಡಬೇಕಾಗಿದೆ (ವಿಸ್ತಾರವಾದ ಮಾಹಿತಿ).